**4003/7011/5031/6011**

**I Semester 3 Year LL.B./II Semester 5 Year B.Com. LL.B./II Semester 5 Year B.A.LL.B. (Maj.-Min.)/II Semester 5 Year B.B.A.LL.B. Examination, December 2019**
**LAW OF TORTS**
**(2018 and 2019 Batch)**

Duration : 3 Hours Max. Marks : 80

**Instructions :** 1. Answer **all five** Units. One essay type question and short note/problem is **compulsory**, from **each** Unit.
2. Figure to the **right** indicate marks.
3. Answer to be written either in **English** or **Kannada completely**.

UNIT – I

Q. No. 1. a) Define tort. Explain damnum sine injuria with appropriate cases. Marks : 10

ಅಪಕೃತ್ಯ ವ್ಯಾಖ್ಯಾನಿಸಿ. ಸಮರ್ಪಕ ಪ್ರಕರಣಗಳೊಂದಿಗೆ ನಷ್ಟವಿಲ್ಲದ ಹಾನಿ (ಡಾಮ್ನಂ ಸೈನೆ ಇಂಜೂರಿಯಾ)ಯನ್ನು ವಿವರಿಸಿರಿ.

OR/ಅಥವಾ

Explain the importance of mental elements in torts.
ಅಪಕೃತ್ಯದಲ್ಲಿ ಮಾನಸಿಕ ಅಂಶಗಳ ಪ್ರಾಮುಖ್ಯತೆಯನ್ನು ವಿವರಿಸಿ.

b) The defendant, a Returning Officer refused to register the vote of the plaintiff, who was a qualified voter. Though the candidate for whom the plaintiff wanted to vote wins, the plaintiff sues defendant for compensation. Decide. Marks : 6

ಚುನಾವಣಾಧಿಕಾರಿಯಾದ ಪ್ರತಿವಾದಿಯು, ವಾದಿಯು ನ್ಯಾಯಸಮ್ಮತ ಮತದಾರನಾಗಿದ್ದಾಗ್ಯೂ, ಕೂಡಾ ಮತದಾನ ಮಾಡಲು ಅವಕಾಶವನ್ನು ನಿರಾಕರಿಸುವನು. ವಾದಿಯು ಮತ ಹಾಕಬೇಕೆಂದಿದ್ದ ಅಭ್ಯರ್ಥಿಯು ಗೆದ್ದಿದ್ದರೂ ಕೂಡಾ, ವಾದಿಯು ತನ್ನ ಹಕ್ಕಿನ ಚ್ಯುತಿಗಾಗಿ ಪರಿಹಾರ ಕೋರುವನು. ನಿರ್ಧರಿಸಿ.

OR/ಅಥವಾ

P.T.O.

The plaintiff builds 16 shops on the old foundations of a building without obtaining necessary permission from the Municipality. Municipality officials demolishes the said building. The plaintiff claims compensation. Decide.

ವಾದಿಯು ತನ್ನ ಹಳೆಯ ಕಟ್ಟಡದ ಅಸ್ತಿಭಾರದ ಮೇಲೆ, ಮುನಿಸಿಪಾಲಿಟಿಯ ಪರವಾನಗಿ ಇಲ್ಲದೆ, ಹದಿನಾರು ಅಂಗಡಿಗಳನ್ನು ಕಟ್ಟಿಸುವನು. ಮುನಿಸಿಪಾಲಿಟಿಯ ಅಧಿಕಾರಿಗಳು ಆ ಅಂಗಡಿಗಳನ್ನು ನೆಲಸಮ ಮಾಡುವರು. ವಾದಿಯು ಪರಿಹಾರ ಬಯಸುವನು. ನಿರ್ಧರಿಸಿ.

## UNIT – II

Q. No. 2. a) Explain volenti non-fit injuria as a defence for tortious liability with exceptions. Marks : 10

ಸಮ್ಮತಿ ಇತ್ತವನ್ನು ಕ್ಷತಿ ಹೊಂದುವುದಿಲ್ಲ ಎಂಬುದನ್ನು ಅಪಕೃತ್ಯದ ಹೊಣೆಗಾರಿಕೆಗೆ ಪ್ರತಿರಕ್ಷೆಯಾಗಿ ಅದಕ್ಕಿರುವ ಅಪವಾದಗಳೊಂದಿಗೆ ವಿವರಿಸಿ.

OR/ಅಥವಾ

Explain inevitable accident and self defence with appropriate cases.

ಸಮರ್ಪಕ ಪ್ರಕರಣಗಳೊಂದಿಗೆ ಅನಿವಾರ್ಯ ಅಪಘಾತ ಮತ್ತು ''ಸ್ವರಕ್ಷಣೆ''ಯನ್ನು ವಿವರಿಸಿ.

b) A main pipe was laid down by the company properly. But due to severe frost, the pipe got burst and water escaped from the pipe and caused damage to plaintiff's property. Decide. Marks : 6

ಪ್ರತಿವಾದಿಯ ಜಲಕಾರ್ಯ ಮಂಡಲಿಯು ಸಮರ್ಪಕವಾಗಿ ನೀರಿನ ಪೂರೈಕೆಗಾಗಿ ಪೈಪ್‌ಲೈನನ್ನು ಅಳವಡಿಸಿತ್ತು. ಆದರೆ ಆ ಬಾರಿಯು ಅಪಾರವಾದ ಮಂಜಿನಿಂದಾಗಿ, ಪೈಪಿನ ಒಳಗಡೆ ನೀರು ಹೆಪ್ಪುಗಟ್ಟಿ ಮಂಜುಗಡ್ಡೆಗಳಾಗಿ ಪೈಪ್ ಒಡೆಯಿತು. ಅದೇ ನಂತರ ನೀರಾಗಿ ವಾದಿಯ ಆಸ್ತಿಗೆ ಹಾನಿಯುಂಟು ಮಾಡಿತು. ನಿರ್ಧರಿಸಿ.

OR/ಅಥವಾ

The defendant left his car with leaving his dog inside, and went for shopping. When he came back, he was told that the dog broke the glass of the car and splinter of the glass fell in to the plaintiff's eye and blinded him. Decide his liability.

ಪ್ರತಿವಾದಿಯು ತನ್ನ ಸಾಕುನಾಯಿಯನ್ನು ಕಾರಿನ ಒಳಗೆ ಬಿಟ್ಟು, ಅಂಗಡಿಯಲ್ಲಿ ಸಾಮಾನುಗಳನ್ನು ಖರೀದಿಸಲು ಹೋಗುವನು. ಅವನು ಹಿಂತಿರುಗಿ ಬರುವಾಗ, ನಾಯಿಯು ಕಾರಿನ ಗಾಜನ್ನು ಒಡೆದುದರಿಂದ ಅದರ ಗಾಜಿನ ತುಂಡು ವಾದಿಯ ಕಣ್ಣಿಗೆ ತಾಗಿ ಕುರುಡಾದನೆಂದು ಹೇಳಲ್ಪಡುವನು. ಅವನ ಹೊಣೆಗಾರಿಕೆಯನ್ನು ನಿರ್ಧರಿಸಿರಿ.

UNIT – III

Q. No. 3. a) Define negligence. Explain the essentials of negligence with appropriate cases. Marks : 10
ನಿರ್ಲಕ್ಷತೆಯನ್ನು ವ್ಯಾಖ್ಯಾನಿಸಿ. ನಿರ್ಲಕ್ಷತೆಯ ಅಗತ್ಯತೆಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ

Explain the various kinds of remedies available in tort.
ಅಪಕೃತ್ಯದಲ್ಲಿರುವ ವಿವಿಧ ರೀತಿಯ ಪರಿಹಾರಗಳನ್ನು ವಿವರಿಸಿ.

b) The defendant was the owner of a cinema house, adjoining a public road. He had put up a hoarding with wooden frame from the roof of his house projecting on to the road. It fell upon the plaintiff and injured him. Decide. Marks : 6
ಪ್ರತಿವಾದಿಯು ಒಂದು ಸಿನಿಮಾ ಥಿಯೇಟರ್‌ನ ಮಾಲೀಕನಾಗಿದ್ದು ತನ್ನ ಮನೆಯ ಮೇಲ್ಛಾವಣಿಯಿಂದ ಸಾರ್ವಜನಿಕ ರಸ್ತೆಗೆ ಚಾಚುವಂತೆ ಒಂದು ದೊಡ್ಡ ಜಾಹೀರಾತು ಫಲಕವನ್ನು ಅಳವಡಿಸಿದ್ದನು. ಅದು ಒಮ್ಮೆ ವಾದಿಯ ಮೇಲೆ ಬಿದ್ದು ಆತನು ಗಾಯಗೊಳ್ಳುವನು. ನಿರ್ಧರಿಸಿ.

OR/ಅಥವಾ

The husband of the appellant boarded a bus, he was just in the foot board, the driver attempted to overtake another stationary bus so closely that the husband got severe injuries and died. The widow claims compensation.
ವಾದಿಯ ಪತಿಯು ಬಸ್‌ಗೆ ಹತ್ತಿ ಇನ್ನೂ ಮೆಟ್ಟಿಲ ಬಳಿ ಇರುವಾಗಲೇ ಬಸ್ ಚಾಲಕನು ಅಲ್ಲಿ ನಿಂತಿದ್ದ ಒಂದು ಬಸ್ಸನ್ನು ಅತ್ಯಂತ ಹತ್ತಿರದಿಂದ ಬಳಸಿ ಹೋಗುವನು. ಎರಡು ಬಸ್‌ಗಳ ನಡುವೆ ಸಿಲುಕಿ ವಾದಿಯ ಪತಿಯು ತೀವ್ರವಾಗಿ ಗಾಯಗೊಂಡು ಮರಣಿಸುವನು. ವಾದಿಯು ಪರಿಹಾರ ಬಯಸುವಳು. ನಿರ್ಧರಿಸಿ.

UNIT – IV

Q. No. 4. a) Define defamation. What are the essentials of defamation ? Marks : 10
ಮಾನಹಾನಿಯನ್ನು ವ್ಯಾಖ್ಯಾನಿಸಿ. ಮಾನಹಾನಿಯ ಮುಖ್ಯಾಂಶಗಳು ಯಾವುವು ?

OR/ಅಥವಾ

What is conspiracy ? What should be proved in an action for conspiracy ? Refer to decided cases.
ಒಳಸಂಚು ಎಂದರೇನು ? ಒಳಸಂಚಿನ ದಾವೆಯಲ್ಲಿ ಏನನ್ನು ರುಜುವಾತು ಮಾಡಬೇಕು ? ಪ್ರಕರಣಗಳೊಂದಿಗೆ ಉಲ್ಲೇಖಿಸಿ.

b) The defendant wrote a letter to a virtuous woman using very abusive words to her. He enclosed it in an envelop properly fastened and posted it to her. Does this amount to defamation ? Marks : 6

ಪ್ರತಿವಾದಿಯು ಓರ್ವ ಕುಲೀನ ಸ್ತ್ರೀಗೆ ಕೆಟ್ಟ ಶಬ್ದಗಳನ್ನು ಉಪಯೋಗಿಸಿ ಪತ್ರವನ್ನು ಬರೆಯುವನು. ಅದನ್ನು ಸರಿಯಾದ ಕವರಿನಲ್ಲಿ ಹಾಕಿ ಅಂಟಿಸಿ ಆಕೆಗೆ ಅಂಚೆಯಲ್ಲಿ ಕಳಿಸುವನು. ಇದು ಮಾನಹಾನಿಯಾಗಬಹುದೇ ?

OR/ಅಥವಾ

Write a note on intimidation.

'ಭೀತಿ ಹುಟ್ಟಿಸುವುದರ' ಬಗೆಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

UNIT – V

Q. No. 5. a) Explain the composition and jurisdiction of the State Commission under Consumer Protection Act, 1986. Marks : 10

1986ರ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ರಾಜ್ಯ ಆಯೋಗದ ರಚನೆ ಮತ್ತು ಅಧಿಕಾರ ವ್ಯಾಪ್ತಿಯ ಬಗ್ಗೆ ವಿವರಿಸಿ.

OR/ಅಥವಾ

Explain the salient features of Motor Vehicle Act, 1988.

ಮೋಟಾರು ವಾಹನ ಕಾಯಿದೆ, 1988ರ ಲಕ್ಷಣಗಳನ್ನು ವಿವರಿಸಿ.

b) Write short note on : Marks : 6

ಲಘು ಟಿಪ್ಪಣಿ ಬರೆಯಿರಿ :

Restrictive trade practice.

ನಿರ್ಬಂಧಿತ ವ್ಯಾಪಾರಿ ಕ್ರಮ.

OR/ಅಥವಾ

Deficiency in service.

ಸೇವೆಯಲ್ಲಿ ನ್ಯೂನತೆ.

**4003**

**3 Year LL.B. First Semester Examination, December 2018**
**(2018 Batch)**
**LAW OF TORTS**

Duration : 3 Hours Max. Marks : 80

**Instructions** : 1. Answer **all five** Units.
2. **One** essay type question and **one** short note/ problem is **compulsory** from **each** Unit.
3. Figures to the **right** indicate marks.
4. Answer should be written **either** in **English** or in **Kannada completely**.

UNIT – I

Q. No. 1. a) Explain 'damnum sine injuria' and 'injuria sine damno' with decided cases. Marks : 10
ನಿರ್ಧರಿತ ಪ್ರಕರಣಗಳೊಂದಿಗೆ 'ಹಾನಿಯಿಲ್ಲದ ನಷ್ಟ' ಮತ್ತು ನಷ್ಟವಿಲ್ಲದ ಹಾನಿ'ಯನ್ನು ವಿವರಿಸಿರಿ.

OR

a) Discuss the importance of mental elements in tortious liability. Marks : 10
ಅಪಕೃತ್ಯದ ಹೊಣೆಗಾರಿಕೆಯಲ್ಲಿ ಮಾನಸಿಕ ಅಂಶಗಳ ಪ್ರಾಮುಖ್ಯತೆಯನ್ನು ಚರ್ಚಿಸಿರಿ.

b) John walks across Jack's field without his permission causing no damage. Has he committed any wrongful act ? Decide. Marks : 6
ಜಾನ್‌ನು ಜಾಕ್‌ನ ಪರವಾನಿಗೆ ಇಲ್ಲದೆ, ಯಾವುದೇ ನಷ್ಟವನ್ನುಂಟು ಮಾಡದೆ, ಜಾಕ್‌ನ ಹೊಲದಲ್ಲಿ ಹಾಯ್ದು ಹೋಗುತ್ತಾನೆ. ಜಾನ್‌ನು ಯಾವುದೇ ಅಕ್ರಮಕಾರಕ ಕೃತ್ಯ ಎಸಗಿದ್ದಾನೆಯೇ ? ನಿರ್ಧರಿಸಿರಿ.

OR

b) 'X' dug a well in his land for use of his farm, as a result of which water from the well of 'Y', his neighbour, dried away. Can Y sue X ? Decide. Marks : 6
'X' ನು ತನ್ನ ಜಮೀನಿನಲ್ಲಿ, ಜಮೀನಿನ ಉಪಯೋಗಕ್ಕಾಗಿ ಒಂದು ಬಾವಿಯನ್ನು ತೋಡುತ್ತಾನೆ. ಪರಿಣಾಮವಾಗಿ, ಅವನ ನೆರೆಯವನಾದ 'Y'ನ ಬಾವಿಯ ನೀರು ಒಣಗಿ ಹೋಯಿತು. 'Y'ನು 'X' ನ ವಿರುದ್ಧ ದಾವೆ ಹೂಡಬಹುದೇ ? ನಿರ್ಧರಿಸಿರಿ.

UNIT – II

Q. No. 2. a) Discuss the liability of master for the wrongful acts of his servant. Marks : 10

ತನ್ನ ಸೇವಕನ ಅಕ್ರಮಕಾರಕ ಕೃತ್ಯಗಳಿಗೆ ಮಾಲಿಕನ ಹೊಣೆಗಾರಿಕೆಯನ್ನು ಚರ್ಚಿಸಿರಿ.

OR

a) Explain 'inevitable accident' and 'private defence' as defences to tortious liability. Marks : 10

ಅಪಕೃತ್ಯದ ಹೊಣೆಗಾರಿಕೆಗೆ ಪ್ರತಿ ರಕ್ಷೆಯಾಗಿ 'ಅನಿವಾರ್ಯ ಅಪಘಾತ' ಮತ್ತು 'ಖಾಸಗಿ ರಕ್ಷಣೆ'ಯನ್ನು ವಿವರಿಸಿರಿ.

b) The plaintiff sent her fur coat to defendant for dry-cleaning. The defendant assigned this work to his servant. The servant stole the coat. Decide the liability of the defendant. Marks : 6

ವಾದಿಯು ತನ್ನ ಫರ್ ಕೋಟನ್ನು ಸ್ವಚ್ಛಗೊಳಿಸುವುದಕ್ಕಾಗಿ ಪ್ರತಿವಾದಿಗೆ ಕಳುಹಿಸಿದನು. ಪ್ರತಿವಾದಿಯು ಅದನ್ನು ತನ್ನ ಸೇವಕನಿಗೆ ವಹಿಸಿಕೊಟ್ಟನು. ಸೇವಕನು ಕೋಟನ್ನು ಕಳವು ಮಾಡಿದನು. ಪ್ರತಿವಾದಿಯ ಹೊಣೆಗಾರಿಕೆಯನ್ನು ತೀರ್ಮಾನಿಸಿರಿ.

OR

b) Due to heavy rainfall the wall of defendants house collapsed resulting in death of plaintiff's child. In an action for damages, the defendant pleaded the defence of act of God. Can he succeed ? Decide. Marks : 6

ಅತಿಯಾದ ಮಳೆಯು ಸುರಿದಿದ್ದರಿಂದ ಪ್ರತಿವಾದಿಯ ಮನೆಯ ಗೋಡೆ ಕುಸಿದ ಪರಿಣಾಮವಾಗಿ ವಾದಿಯ ಮಗುವು ಮರಣ ಹೊಂದಿತು. ಪರಿಹಾರ ಕೋರಿ ವಾದಿಯು ಹೂಡಿದ ದಾವೆಯಲ್ಲಿ ಪ್ರತಿವಾದಿಯು ದೈವೀಕೃತ್ಯದ ಪ್ರತಿರಕ್ಷೆಯನ್ನು ವಾದಿಸುತ್ತಾನೆ. ಅವನು ಗೆಲ್ಲಬಹುದೇ ? ನಿರ್ಧರಿಸಿರಿ.

UNIT – III

Q. No. 3. a) Discuss the principle of remoteness of damages. Marks : 10

ದೂರದ ನಷ್ಟ ತತ್ವವನ್ನು ಚರ್ಚಿಸಿರಿ.

OR

a) Explain the rule in Rylands V. Fletcher. Marks : 10

ರೈಲ್ಯಾಂಡ್ಸ್ ವಿ. ಫ್ಲೆಚರ್ ಪ್ರಕರಣದಲ್ಲಿಯ ನಿಯಮವನ್ನು ವಿವರಿಸಿರಿ.

b) 'A' parked his car on a street with his dog inside. As 'B' was walking pass the car, the dog which had been jumping inside smashed the glass panel and as a result a splinter hit B's eye and caused injury. Is A liable to pay damages to B ? Decide. Marks : 6

'A' ನು ತನ್ನ ಕಾರನ್ನು ಒಳಗಿದ್ದ ನಾಯಿಯ ಸಮೇತ ರಸ್ತೆಯ ಪಕ್ಕ ನಿಲ್ಲಿಸುತ್ತಾನೆ. 'B'ಯು ಆ ಕಾರಿನ ಬಳಿ ನಡೆದು ಹೋಗುತ್ತಿರುವಾಗ, ಆ ನಾಯಿಯು ಕಾರಿನ ಗಾಜನ್ನು ಒಡೆದು ಹಾಕುತ್ತದೆ. ಅದರಿಂದ ಸಿಡಿದ ಗಾಜಿನ ಚೂರೊಂದು 'B' ಯ ಕಣ್ಣಿಗೆ ಬಡಿದು ಗಾಯ ಉಂಟು ಮಾಡುತ್ತದೆ. 'A' ನು 'B' ಗೆ ಪರಿಹಾರ ಕೊಡಲು ಹೊಣೆಗಾರನಾಗುತ್ತಾನೆಯೇ ? ನಿರ್ಧರಿಸಿರಿ.

OR

b) 'M' employed 'C' an independent contractor to repair a lamp overhanging the front doorway. As it was not properly fastened, the lamp fell on 'P' a passerby. 'P' sustained injuries. Can 'P' claim damages from M ? Decide. Marks : 6

ಮುಂಬಾಗಿಲಿನ ಮುಂದಿನ ದಾರಿಯಲ್ಲಿ ನೇತಾಡುತ್ತಿದ್ದ ದೀಪವನ್ನು ದುರಸ್ತಿ ಮಾಡಲು 'M' ನು 'C' ಎಂಬ ಸ್ವತಂತ್ರ ಗುತ್ತಿಗೆದಾರನನ್ನು ನೇಮಕ ಮಾಡಿದನು. ಆ ದೀಪವನ್ನು ಸರಿಯಾಗಿ ಬಿಗಿಯದೇ ಇದ್ದುದರಿಂದ ಅದು 'P' ಎಂಬ ದಾರಿಹೋಕನ ಮೇಲೆ ಬಿದ್ದು, 'P' ಯು ಗಾಯಗೊಂಡನು. 'P' ಯು 'M' ನ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆ ಹೂಡಬಹುದೇ ? ನಿರ್ಧರಿಸಿರಿ.

## UNIT – IV

Q. No. 4. a) Define defamation. Distinguish between libel and slander. Marks : 10

ಮಾನಹಾನಿಯನ್ನು ವ್ಯಾಖ್ಯಾನಿಸಿರಿ. ಲಿಖಿತ ಮಾನಹಾನಿ ಮತ್ತು ಮೌಖಿಕ ಮಾನಹಾನಿಯ ನಡುವಿನ ವ್ಯತ್ಯಾಸ ಹೇಳಿರಿ.

OR

a) Explain the tort of conversion. Marks : 10

'ರೂಪಾಂತರ' ಅಪಕೃತ್ಯವನ್ನು ವಿವರಿಸಿರಿ.

b) In order to protect his crop from trespassing pigs 'X' laid traps on his land. Y's cow strayed into that land and fell into the trap and was killed. Can 'X' be held liable to pay damages ? Decide. Marks : 6

ಹಂದಿಗಳ ಆಕ್ರಮಣದಿಂದ ತನ್ನ ಬೆಳೆಯನ್ನು ರಕ್ಷಿಸಲು 'X' ನು ತನ್ನ ಹೊಲದಲ್ಲಿ ಬಲೆ ಹಾಕಿದ್ದನು. 'Y' ನ ಆಕಳು ಆ ಹೊಲದಲ್ಲಿ ನುಗ್ಗಿ, ಬಲೆಯಲ್ಲಿ ಬಿದ್ದು ಸತ್ತಿತು. 'X' ನು ನಷ್ಟ ಪರಿಹಾರ ನೀಡಲು ಬಾಧ್ಯನೇ ? ನಿರ್ಧರಿಸಿರಿ.

OR

b) Some persons combine and go to the theatre and boo and hoat out an actor. What is their liability ? Decide. Marks : 6

ಕೆಲವು ವ್ಯಕ್ತಿಗಳು ಕೂಡಿಕೊಂಡು ಒಂದು ನಾಟಕ ಗೃಹಕ್ಕೆ ಹೋಗುತ್ತಾರೆ ಮತ್ತು ಒಬ್ಬ ಕಲಾವಿದನ ವಿರುದ್ಧ ಕಿರುಚಾಡಿ ಗದ್ದಲ ಎಬ್ಬಿಸುತ್ತಾರೆ. ಅವರ ಹೊಣೆಗಾರಿಕೆಯೇನು ? ನಿರ್ಧರಿಸಿರಿ.

## UNIT – V

Q. No. 5. a) Explain the composition, powers and functions of State Commission under the Consumer Protection Act. Marks : 10

ಗ್ರಾಹಕ ರಕ್ಷಣಾ ಅಧಿನಿಯಮದಡಿ ರಾಜ್ಯ ಆಯೋಗದ ರಚನೆ, ಅಧಿಕಾರ ಹಾಗೂ ಕಾರ್ಯಗಳನ್ನು ವಿವರಿಸಿರಿ.

OR

a) Explain the salient features of Motor Vehicles Act. Marks : 10

ಮೋಟಾರು ವಾಹನ ಅಧಿನಿಯಮದ ವಿಶಿಷ್ಟ ಲಕ್ಷಣಗಳನ್ನು ವಿವರಿಸಿರಿ.

b) A Surgeon in hospital 'X' conducted an eye operation on Mr., 'P' negligently, as a result 'P' lost his eye sight partially. P wants to claim 15 lakhs as compensation before the consumer forum. Advice him. Marks : 6

'X' ಆಸ್ಪತ್ರೆಯಲ್ಲಿ ಒಬ್ಬ ಶಸ್ತ್ರಚಿಕಿತ್ಸಕನು 'P'ಯ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ನಿರ್ಲಕ್ಷತೆಯಿಂದ ಮಾಡಿದ ಪರಿಣಾಮ Pಯು ದೃಷ್ಟಿಯನ್ನು ಭಾಗಶಃ ಕಳೆದುಕೊಂಡನು. Pಯು ಗ್ರಾಹಕ ವೇದಿಕೆಯಲ್ಲಿ 15 ಲಕ್ಷ ರೂಪಾಯಿ ಪರಿಹಾರ ಕೋರ ಬಯಸುತ್ತಾನೆ. ಅವನಿಗೆ ಸಲಹೆ ನೀಡಿರಿ.

OR

b) Write short note on "insurance against third party risks". Marks : 6

"ಮೂರನೆಯ ಪಕ್ಷದ ಅಪಾಯಗಳ ವಿರುದ್ಧ ವಿಮೆಯ ಕುರಿತು ಲಘು ಟಿಪ್ಪಣಿ ಬರೆಯಿರಿ.

---

**I Semester 3 Yr. LL.B./II Semester 5 Yr. B.Com. LL.B./II Semester 5 Yr. B.A. LL.B. (Maj.-Min. System)/II Semester 5 Yr. B.B.A. LL.B.**
**Examination, June/July 2019**
**LAW OF TORTS**
**(2018 Batch)**

Duration : 3 Hours Max. Marks : 80

**Instructions :** 1. Answer **all five** Units.
2. **One** essay type question and short note is **compulsory** from **each** Unit.
3. Figures to the **right** indicate marks.
4. Answers should be written either in **English** or **Kannada** completely.

**Unit – I**

Q. No. 1. a) Explain the Maxim damnum sine injuria and Injuria sine damnum with the help of leading cases. Marks : 10
ಹಾನಿಯಿಲ್ಲದ ನಷ್ಟ ಮತ್ತು ನಷ್ಟವಿಲ್ಲದ ಹಾನಿಯನ್ನು ಮುಖ್ಯ ಪ್ರಕರಣಗಳ ಸಹಾಯದಿಂದ ತಿಳಿಸಿರಿ.

OR

Q. No. 1. a) Define 'Tortious Liability'. Distinguish between Tort and breach of contract. Marks : 10
ಅಪಕೃತ್ಯದ ಹೊಣೆಗಾರಿಕೆಯನ್ನು ವ್ಯಾಖ್ಯಾನಿಸಿರಿ. ಅಪಕೃತ್ಯ ಮತ್ತು ಒಪ್ಪಂದದ ಚ್ಯುತಿ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

Q. No. 1. b) A child of seven years ate some attractive berries from a tree in a Municipal Park. The berries were poisonous. The child died. Can the Municipality be made liable ? Marks : 6
ಏಳು ವರ್ಷದ ಮಗು ಪುರಸಭೆಯ ಉದ್ಯಾನವನದಲ್ಲಿದ್ದ ಒಂದು ಮರದಿಂದ ಆಕರ್ಷಣೀಯವಾಗಿದ್ದ ಹಣ್ಣುಗಳನ್ನು ತಿಂದಿತು. ಆ ಹಣ್ಣುಗಳು ವಿಷಪೂರಿತವಾಗಿದ್ದವು. ಮಗು ಮರಣ ಹೊಂದಿತು. ಪುರಸಭೆಯನ್ನು ಬಾಧ್ಯ ಮಾಡಬಹುದೇ ?

OR

Q. No. 1. b) Write a short note on 'Motive' as an element of a Tort. Marks : 6
''ಪ್ರೇರಣೆ'' (ಉದ್ದೇಶ) ಅಪಕೃತ್ಯದ ಒಂದು ಘಟಕಾಂಶ ಎನ್ನುವುದರ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

**Unit – II**

Q. No. 2. a) What are the exceptions to Volenti non fit injuria ? Explain with cases. Marks : 10
ಸ್ವಯಂ ಸಮ್ಮತಿಯಿಂದಾಗುವ ಕ್ಷತಿ ಅಪಕೃತ್ಯವಲ್ಲ ಎನ್ನುವ ನಿಯಮಕ್ಕಿರುವ ಅಪವಾದಗಳಾವುವು ? ಪ್ರಕರಣಗಳೊಂದಿಗೆ ವಿವರಿಸಿ.

OR

Q. No. 2. a) Explain Vicarious Liability. What are the circumstances in which the master will be liable for the acts of his servant ? Marks : 10
ಬದಲಿ ಹೊಣೆಗಾರಿಕೆಯನ್ನು ವಿವರಿಸಿ. ಯಾವ ಸಂದರ್ಭಗಳಲ್ಲಿ ಮಾಲೀಕನು ಸೇವಕನು ಮಾಡಿದ ಕೃತ್ಯಗಳಿಗೆ ಹೊಣೆಗಾರನಾಗುತ್ತಾನೆ ?

Q. No. 2. b) Write short note on 'Vis Major'. Marks : 6
'ದೈವೀ ಕೃತ್ಯ'ದ ಮೇಲೆ ಒಂದು ಲಘು ಟಿಪ್ಪಣಿ ಬರೆಯಿರಿ.

OR

Q. No. 2. b) A driver of the defendant's omnibus had printed instructions not to race with or obstract, other omnibuses. In disobedience to this order he obstracted the plaintiffs. Omnibus and caused a collision which damaged it. What is the liability ? Decide. Marks : 6
ಪ್ರತಿವಾದಿಯ ಬಸ್ಸಿನ ಚಾಲಕನು ಬೇರೆ ಬಸ್ಸುಗಳೊಂದಿಗೆ ಸ್ಪರ್ಧಿಸಬಾರದು ಅಥವಾ ತಡೆಯುಂಟು ಮಾಡಬಾರದು ಎಂದು ಕರಪತ್ರಗಳನ್ನು ಪ್ರಿಂಟ್ ಮಾಡಿಸಿದನು. ಈ ಸೂಚನೆಗಳಿಗೆ ವಿರುದ್ಧವಾಗಿ ವಾದಿಯ ಬಸ್ಸಿಗೆ ಅಡಚಣೆಯುಂಟು ಮಾಡಿ ಡಿಕ್ಕಿ ಹೊಡೆಸಿದರ ಪರಿಣಾಮವಾಗಿ ಬಸ್ಸು ಜಖಂ ಆಯಿತು. ಯಾವ ಹೊಣೆಗಾರಿಕೆ ಇದೆ ? ನಿರ್ಧರಿಸಿ.

**Unit – III**

Q. No. 3. a) Discuss the rule laid down in Rylands V. Fletcher case with exceptions. Marks : 10
ಅಪವಾದಗಳೊಂದಿಗೆ ರೈಲ್ಯಾಂಡ್ಸ್ ವಿರುದ್ಧ ಫ್ಲೆಚರ್ ಪ್ರಕರಣದ ನಿಯಮವನ್ನು ಚರ್ಚಿಸಿ.

OR

Q. No. 3. a) What is Nuisance ? Distinguish between Private and Public Nuisance. Marks : 10
ಉಪದ್ರವ ಎಂದರೇನು ? ಖಾಸಗಿ ಮತ್ತು ಸಾರ್ವಜನಿಕ ಉಪದ್ರವಗಳಿಗಿರುವ ವ್ಯತ್ಯಾಸವೇನು ?

Q. No. 3. b) The Plaintiff resided in a house next to a Roman Catholic Chapel of which the defendant was the Priest and the Chapel bell was ringing very loud of all hours of the day and night. Decide. Marks : 6

ವಾದಿಯು ರೋಮನ್ ಕ್ಯಾಥೋಲಿಕ್ ಚರ್ಚಿನ ಬದಿಯ ಮನೆಯಲ್ಲಿ ವಾಸಿಸುತ್ತಿದ್ದನು. ಪ್ರತಿವಾದಿಯು ಆ ಚರ್ಚಿನ ಪಾದ್ರಿ. ಆ ಚರ್ಚಿನ ಗಂಟೆಯು ಹಗಲೂ ಮತ್ತು ರಾತ್ರಿ ಜೋರಾಗಿ ಬಾರಿಸುತ್ತಿತ್ತು. ನಿರ್ಧರಿಸಿ.

OR

Q. No. 3. b) Write short note on 'Remoteness of Damage. Marks : 6

''ದೂರದ ಸಂಬಂಧದ ನಷ್ಟ''ದ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

## Unit – IV

Q. No. 4. a) Explain the difference between libel and slander. When slander becomes actionable per se ? Marks : 10

ಲಿಖಿತ ಮಾನಹಾನಿ ಮತ್ತು ಮೌಖಿಕ ಮಾನಹಾನಿಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಿ. ಮೌಖಿಕ ಮಾನಹಾನಿಯು ಯಾವಾಗ ಅದರಿಂದಲೇ ಕ್ರಮಾರ್ಹವಾಗುವುದು ?

OR

Q. No. 4. a) Define Assault and distinguish it from battery. State the circumstances when they may be justified. Marks : 10

'ಹಲ್ಲೆ'ಯನ್ನು ವ್ಯಾಖ್ಯಾನಿಸಿರಿ ಮತ್ತು 'ಪ್ರಹಾರ'ದಿಂದ ಅದಕ್ಕಿರುವ ವ್ಯತ್ಯಾಸವನ್ನು ತಿಳಿಸಿರಿ. ಅವುಗಳನ್ನು ಯಾವ ಸಂದರ್ಭಗಳಲ್ಲಿ ಸಮರ್ಥಿಸಿಕೊಳ್ಳಬಹುದು ತಿಳಿಸಿರಿ.

Q. No. 4. b) 'A' defames 'B' and dies before 'B' could bring action against him, under this circumstances is there any remedy for 'B' according to Law ? Marks : 6

'ಎ'ಯು 'ಬಿ'ಗೆ ಮಾನಹಾನಿಯನ್ನು ಮಾಡಿ 'ಬಿ'ಯು ದಾವೆ ಹಾಕುವುದಕ್ಕೆ ಮುಂಚೆ ಸಾಯುತ್ತಾನೆ. ಈ ಸಮಯದಲ್ಲಿ 'ಬಿ'ಗೆ ಇರುವ ಪರಿಹಾರವೇನು ?

OR

Q. No. 4. b) Write a short note on 'Malicious Prosecution'. Marks : 6

''ದುರುದ್ದೇಶದ ಅಭಿಯೋಜನೆ'ಯ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

## Unit – V

Q. No. 5. a) Explain the composition and jurisdiction of the National Commission under Consumer Protection Act, 1986. Marks : 10

ಗ್ರಾಹಕ ಸಂರಕ್ಷಣಾ ಅಧಿನಿಯಮ, 1986ರಡಿಯಲ್ಲಿನ 'ರಾಷ್ಟ್ರೀಯ ಆಯೋಗ'ದ ರಚನೆ ಮತ್ತು ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.

OR

Q. No. 5. a) For the purpose of promoting the sale, the tradesman adopts unfair Trade Practices. What are those practices ? Explain. Marks : 10

ಮಾರಾಟವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ವ್ಯಾಪಾರಿಯು ಅನುಚಿತ ವಾಣಿಜ್ಯ ಆಚರಣೆಗಳನ್ನು ಅಳವಡಿಸಿಕೊಂಡಿದ್ದಾರೆ. ಅವು ಯಾವ ಯಾವ ಆಚರಣೆಗಳೆಂಬುದನ್ನು ವಿವರಿಸಿ.

Q. No. 5. b) Write a short note on Third Party Insurance. Marks : 6

ಮೂರನೇ ಪಾರ್ಟಿಯ ವಿಮೆಯ ಬಗ್ಗೆ ಟಿಪ್ಪಣಿ ಬರೆಯಿರಿ.

OR

Q. No. 5. b) 'A' a lady underwent a 'tubectomy' operation at the Government hospital in Thumkur. Later she developed serious complications due to operation which reduced her to the condition of a physically invalid person. The lady filed a case and demanded compensation against the Government. Decide. Marks : 6

'A' ಎಂಬ ಒಬ್ಬ ಮಹಿಳೆ, ತುಮಕೂರಿನ ಸರ್ಕಾರಿ ಆಸ್ಪತ್ರೆಯೊಂದರಲ್ಲಿ 'ಟ್ಯೂಬೆಕ್ಟಮಿ' ಆಪರೇಷನ್ ಮಾಡಿಸಿಕೊಳ್ಳುತ್ತಾಳೆ. ಅನಂತರ, ಆಪರೇಷನ್ ಪರಿಣಾಮವಾಗಿ ಕೆಲವು ತೀಕ್ಷ್ಣವಾದ ತೊಂದರೆಗಳು ಕಾಣಿಸಿಕೊಂಡು ಅವಳು ದೈಹಿಕವಾಗಿ ಉಪಯೋಗವಲ್ಲದ ವ್ಯಕ್ತಿಯಾಗುತ್ತಾಳೆ. ಆ ಮಹಿಳೆ ಸರ್ಕಾರದ ವಿರುದ್ಧ ದಾವೆ ಹೂಡಿ ಪರಿಹಾರಕ್ಕಾಗಿ ಒತ್ತಾಯಿಸುತ್ತಾಳೆ. ತೀರ್ಮಾನಿಸಿ.

---